ಪುನಃ ಹಿಂದಿನಂತೆ ಲವಲವಿಕೆ ತೋರಿದಾಗ ನಿಟ್ಟುಸಿರು ಬಿಟ್ಟಿದ್ದರು. ಆಗಲೇ ಮುನ್ನೂರ ಮೂರರ ಇಂದಿರಾ ಕಾರ್ತಿಯ ಈ ಸಂಬಂಧ ಕುದುರಿಸಿದ್ದು. ''ಕಾರ್ತಿ ನನ್ನ ಅಕ್ಕನ ಮಗ, ಒಳ್ಳೆಯ ಹುಡುಗ. ನೀವು ಓಕೆ ಅಂದರೆ ಬೇರೇಲ್ಲ ನಾನು ಸುಧಾರಿಸುತ್ತೇನೆ'' ಎಂದಿದ್ದರು ಇಂದಿರಾ. ಮದುವೆಯಾದ ಮೂರು ತಿಂಗಳಲ್ಲೇ, ''ಮಗಳು ಅಲ್ಲಿ ಹೊಂದಿಕೊಳ್ಳಲು ತೀರಾ ಕಷ್ಟಪಡುತ್ತಿದ್ದಾಳೆ, ಬೀಗರಲ್ಲಿ ಏನೋ ಸಮಸ್ಯೆಯಿದೆ'' ಎಂದಿದ್ದಳು ಪತ್ನಿ.



ಪತ್ನಿಯ ಮರಣಾನಂತರ ಮಗಳೊಡನೆ ಮಾತಾಡುವಾಗಲೆಲ್ಲ ಜೀಕೆಗೆ ಅವಳ ಗಂಡನ ಮನೆಯ ಸಮಸ್ಯೆಗಳ ಸ್ವರೂಪ ಅರಿವಾಗತೊಡಗಿತ್ತು. ಒಬ್ಬಳೇ ಮಗಳಿಗೆ ತವರಿನಿಂದ ಸಂಪತ್ತು ಹರಿದು ಬರಬಹುದೆಂದು ಅವರ ಎಣಿಕೆಯಿತ್ತು. ಹಾಗೆ ಸಂಪತ್ತು ಸಿಗಲಿಲ್ಲ ಎನ್ನುವುದೇ ಮುಖ್ಯ ಕಾರಣ ಎಂದು ತಿಳಿದ ಜೀಕೆ ಆಗಾಗ ಅಳಿಯನಿಗೆ ಸ್ವಲ್ಪ ಸೊತ್ತು ಸವಲತ್ತುಗಳನ್ನು ಮಾಡಿಕೊಟ್ಟಿದ್ದರು. ಹಿಂಡಿದರೆ ಹಾಲು ಬರುತ್ತೆ ಎಂಬ ತಪ್ಪು ಸಂದೇಶ ಸಿಕ್ಕಿದ ಅಳಿಯನ ಮನೆಯವರಿಂದ ಬೇಡಿಕೆ ಮತ್ತೂ ಹೆಚ್ಚಾಯಿತು. ''ಅವರಿಗೆ ಇನ್ನೇನೂ ಕೊಡಬೇಡಿ, ಅವರೆಷ್ಟರ ಮಟ್ಟಿಗೆ ಇದ್ದಾರೆ ಎಂದು ನಾನೂ ನೋಡುತ್ತೇನೆ'' ಎಂದು ಮಗಳು ಹೇಳಿದ ಮೇಲೆ ಜೀಕೆ ಸುಮ್ಮನಾಗಿದ್ದರು. ''ಅಜ್ಜಿ, ಮಾವ, ಅತ್ತೆ ಹಾಗೂ ಗಂಡ ಇವರೆಲ್ಲರ ಜೊತೆ ಸೆಣಸಾಡುವುದೇ ನನ್ನ ನಿತ್ಯಕರ್ಮವಾಗಿದೆ'' ಎನ್ನುತ್ತಿದ್ದಳು ಮಲ್ಲಿಕಾ. ಅವರ ಕಣ್ಣು ಈಗ ನಿಮ್ಮ ಫ್ಲ್ಯಾಟಿನ ಮೇಲೆ ಬಿದ್ದಿದೆ. ನಾವು ಐದು ಮಂದಿ ಎರಡು ಬೆಡ್ರೂಮಿನ ಮನೆಯಲ್ಲಿ ಕಷ್ಟಪಟ್ಟು ತುರುಕಿಸಿಕೊಂಡಿದ್ದೇವೆ. ನಿನ್ನಪ್ಪ ಅಲ್ಲಿ ಒಬ್ಬರೇ ಮೂರು ಬೆಡ್ರೂಮಿನ ಮನೆಯಲ್ಲಿ ಹಾಯಾಗಿದ್ದಾರೆ ಎಂದು ಟೀಕೆ ಆರಂಭವಾಗಿದೆ. ಅಮ್ಮ ಹೇಗೂ ಸತ್ತಾಯಿತು, ನೀವು ಹೋಗುವ ದಿನಕ್ಕೆ ಕಾಯುತ್ತಿದ್ದಾರೆ'' ಎಂದಿದ್ದಳು ಮಗಳು.

ಮತ್ತೆ ಕೆಲವು ತಿಂಗಳು ಸುದ್ದಿಯಿರಲಿಲ್ಲ. ಅಲ್ಲೇನೂ ಸಮಸ್ಯೆ ಇಲ್ಲವೇ? ಅಥವಾ ಮಗಳು ಬಾಯಿಬಿಡುತ್ತಿಲ್ಲವೇ ಎನ್ನುವ ಸಂಶಯ ಬಂದಿತ್ತು. ಹಲವು ಬಾರಿ ಜೀಕೆ ಮಗಳಲ್ಲಿ ಕೇಳಿದ್ದರು ಕೂಡ. ಆಕೆ, ''ನಾನು ನಿಭಾಯಿಸುತ್ತೇನೆ, ನೀವು ಸುಮ್ಮನಿರಿ'' ಎನ್ನುತ್ತಿದ್ದಳು. ಹಾಗೆ ಅಷ್ಟು ಧೈರ್ಯದಿಂದ ಇದ್ದ ಮಗಳು ಇವತ್ತು ಯಾಕೆ ಹೀಗೆ ಮೆಸೇಜು ಮಾಡಿದಳು? ಜೀಕೆ ಮತ್ತೊಮ್ಮೆ ಕಣ್ಣೊರಸಿಕೊಂಡರು.

ಸಮಸ್ಯೆಯ ಅಲ್ಪಸ್ವಲ್ಪ ಪರಿಚಯವಿದ್ದ ಮಿಲಿಟರಿ ಅಂಕಲ್ ಜೀಕೆ ಕರೆದಾಕ್ಷಣ ಹಿಂದುಮುಂದು ನೋಡದೆ ಬಂದಿದ್ದರು. ಬೀಗರ ಮನೆ ತಲುಪಿದರು ಜೀಕೆ. ಬೆಲ್ ಮಾಡಿದಾಗ ಬಾಗಿಲು ತೆರೆಯುತ್ತಲೇ ಮಿಲಿಟರಿ ಅಂಕಲನ್ನು ತೋರಿಸಿ, ಇವರಿಗೆ ಮಲ್ಲಿಕಾಳಲ್ಲಿ ಮಾತನಾಡಬೇಕಂತೆ. ಮಲ್ಲಿಕಾಳನ್ನು ನೋಡಬೇಕು ಎಂದಿದ್ದಾರೆ ಎಂದರು ಜೀಕೆ. ಮಿಲಿಟರಿ ಅಂಕಲ್ ಅವರ ಮೀಸೆ ನೋಡಿಯೇ ಅಪ್ರತಿಭರಾಗಿದ್ದ ಕಾರ್ತಿಯ ಅಮ್ಮ ಅವರನ್ನು ಮಫ್ತಿಯಲ್ಲಿರುವ ಪೊಲೀಸ್ ಎಂದೇ ಭಾವಿಸಿದರು.